**<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,</u>**
**<u>ಕೊಡಗು, ಮಡಿಕೇರಿ.</u>**

**<u>ಸ್ಪೆಷಲ್ ಕೇಸ್ ನಂ. 54/2019</u>**

**ಪ್ರಾಸಾ ಃ 4**

**ಚಾಸಾ ಃ 8**

| | |
|---|---|
| **ಸಾಕ್ಷಿದಾರರ ಹೆಸರು** | **ಃ ಎಂ.ಹೆಚ್. ವಿಜಯಕುಮಾರ್** |
| **ತಂದೆಯ ಹೆಸರು** | **ಃ ಹನುಮಂತಯ್ಯ** |
| **ವಯಸ್ಸು** | **ಃ 52 ವರ್ಷ** |
| **ವೃತ್ತಿ** | **ಃ ಇಂಜಿನಿಯರ್, ಪಿ.ಡಬ್ಲ್ಯು.ಡಿ. ಸೋಮವಾರಪೇಟೆ.** |
| **ವಾಸ** | **ಃ ಸೋಮವಾರಪೇಟೆ.** |

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕಃ 13.07.2023**

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದಃ</u>**

ನಾನು ಆಗಸ್ಟ್ 2018 ರಿಂದ ಸೋಮವಾರಪೇಟೆ ಪಿ.ಡಬ್ಲ್ಯು.ಡಿ., ಕಛೇರಿಯಲ್ಲಿ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನಗೆ ಪ್ರಾಸಾ-1 ಹಾಗೂ ಆರೋಪಿಯ ಪರಿಚಯ ಇದೆ.

ದಿನಾಂಕಃ20.10.2019 ರಂದು ರಾತ್ರಿ 7.30 ರಿಂದ 7.35 ರ ಸಮಯದಲ್ಲಿ ನನ್ನ ಮೊಬೈಲ್ ಗೆ ಪ್ರಾಸಾ-1 ರವರು ಕರೆ ಮಾಡಿದ್ದು, ತಾನು ಗಣಪತಿಯ ವಿಚಾರವಾಗಿ ನನ್ನ ಬಳಿ ಏನಾದರು ಹೇಳಿದ್ದೀನಾ ಎಂದು ಕೇಳಿದರು. ಆ ಸಂದರ್ಭದಲ್ಲಿ ನಾನು ಅವರು ಕೆಲಸದ ವಿಚಾರವನ್ನು ಬಿಟ್ಟು ಬೇರೆ ಯಾವುದೇ ವಿಷಯವನ್ನು ಹೇಳಿಲ್ಲ ಎಂದು ಹೇಳಿರುತ್ತೇನೆ. ಆ ಬಳಿಕ ಫೋನ್ ಕಟ್ಟಾಯಿತು. ಮಾರನೆ ದಿನ ಬೆಳಗ್ಗೆ 11.00 ಗಂಟೆ ಸುಮಾರಿಗೆ ನಾನು ಕಛೇರಿಯಲ್ಲಿ ಇದ್ದಾಗ, ಆರೋಪಿ ಪ್ರಾಸಾ-1 ರವರಿಗೆ ಗುಂಡು

ಹಾರಿಸಿದ್ದಾರೆ ಎಂದು ನನಗೆ ಗೊತ್ತಾಯಿತು. ನನ್ನ ಮೊಬೈಲ್ ನಂಬರ್ 9448325837 ಇರುತ್ತದೆ. ಪ್ರಾಸಾ-1 ರವರ ಮೊಬೈಲ್ ನಂಬರ್ ನನಗೆ ನೆನಪಿಲ್ಲ, ಆದರೆ ಅದು ನನ್ನ ಮೊಬೈಲ್ ನಲ್ಲಿ ಸೇವ್ ಆಗಿರುತ್ತದೆ. ಈ ಬಗ್ಗೆ ನನ್ನನ್ನು ತನಿಖಾಧಿಕಾರಿಯವರು ವಿಚಾರಣೆ ಮಾಡಿದ್ದು, ನಾನು ಅವರಿಗೆ ಹೇಳಿಕೆ ನೀಡಿದ್ದೇನೆ.

**<u>ಪಾಟೀಸವಾಲು ಆರೋಪಿ ಪರ ಎ.ಜಿ.ಜಿ., ವಕೀಲರಿಂದಃ</u>**

ಪ್ರಾಸಾ-1 ರವರು ಚಂದ್ರಶೇಖರ್ ಎಂಬ ಗುತ್ತಿಗೆದಾರರ ಬಳಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ನನಗೆ ಪ್ರಾಸಾ-1 ರವರ ಪರಿಚಯ ಆಗಿದೆ. ಪ್ರಾಸಾ-1 ರವರು ಚಂದ್ರಶೇಖರ್ ರವರ ಬಳಿ ಲೇಬರ್ ಕಾಂಟ್ರಾಕ್ಟ್ ಮಾಡುತ್ತಿದ್ದರು. ಸೋಮವಾರಪೇಟೆ ಪಿ.ಡಬ್ಲ್ಯು.ಡಿ., ಯಲ್ಲಿ ನಾನು ಇಂಜಿನಿಯರ್. 2019 ರ ಅಕ್ಟೋಬರ್ ಅವಧಿಯಲ್ಲಿ ಪುಟ್ಟಮ್ಮ ಎಂಬುವವರು ಅವರ ಮನೆಯ ಬದಿಯ ತಡೆಗೋಡೆಯನ್ನು ಸರ್ಕಾರದ ವತಿಯಿಂದ ನಿರ್ಮಿಸಬೇಕೆಂದು ಕೇಳಿದ್ದರು ಮತ್ತು ಅದು ಸರ್ಕಾರದಿಂದ ಮಂಜೂರಾಗಿತ್ತು. ಈಗ ನಾನು ನೋಡುತ್ತಿರುವ ಫೋಟೋದಲ್ಲಿ ಕಾಣುತ್ತಿರುವ ತಡೆಗೋಡೆ ನಮ್ಮ ಇಲಾಖೆಯಿಂದ ಪುಟ್ಟಮ್ಮರವರಿಗೆ ಮಾಡಿಕೊಟ್ಟ ತಡೆಗೋಡೆ ಅಂದರೆ ಸರಿ. ನಮ್ಮ ಇಲಾಖೆಯಿಂದ ಈ ತಡೆಗೋಡೆ ಕಟ್ಟಲು ಚಂದ್ರಶೇಖರ್ ರವರಿಗೆ ಗುತ್ತಿಗೆ ನೀಡಲಾಗಿತ್ತು ಅಂದರೆ ಸರಿ. ಆ ಸಂದರ್ಭದಲ್ಲಿ ಚಂದ್ರಶೇಖರ್ ರವರ ಜೊತೆಯಲ್ಲಿ ಪ್ರಾಸಾ-1 ರವರು ಲೇಬರ್ ಕಾಂಟ್ರಾಕ್ಟರ್ ಆಗಿ ಕೆಲಸ ಮಾಡುತ್ತಿದ್ದರು ಅಂದರೆ ಸರಿ. ಚಂದ್ರಶೇಖರ್ ರವರು ಪ್ರಾಸಾ-1 ರವರಿಗೆ ಸಬ್ ಕಂಟ್ರಾಕ್ಟ್ ನೀಡಿ ಸದರಿ ತಡೆಗೋಡೆಯನ್ನು ಅವರೇ ಕಟ್ಟಿಸಿದ್ದರು ಅಂದರೆ ಸರಿಯಲ್ಲ. ನನ್ನ ಹಾಗೂ ಚಂದ್ರಶೇಖರ್ ರವರ ಸಂಬಂಧ ಚನ್ನಾಗಿದ್ದ ಕಾರಣ ಚಂದ್ರಶೇಖರ್ ರವರೇ ಸದರಿ ತಡೆಗೋಡೆಯನ್ನು ಕಟ್ಟಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ದಿನಾಂಕಃ15.10.2019 ರಂದು ಆರೋಪಿ ಗಣಪತಿ ತಡೆಗೋಡೆ ಕೆಲಸ ನಿಗಧಿತ ಸಮಯದಲ್ಲಿ ಆಗಿಲ್ಲ ಎಂದು ನನಗೆ ಫೋನ್ ಮಾಡಿದ್ದರು ಅಂದರೆ ಸರಿ. ಪುಟ್ಟಮ್ಮ ಹಾಗೂ ಊರಿನವರ ಒತ್ತಡದಿಂದ ಆರೋಪಿ ಗಣಪತಿ ನನಗೆ ಕರೆ ಮಾಡಿದ್ದರು ಅಂದರೆ ಸಾಕ್ಷಿ ನನಗೆ ಅದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ವಿಚಾರವಾಗಿ ಪ್ರಾಸಾ-1 ಹಾಗೂ ಚಂದ್ರಶೇಖರ್ ರವರಿಗೆ ಆರೋಪಿಯ ಮೇಲೆ ವೈಮನಸ್ಸು ಇತ್ತು ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿನಾಂಕಃ20.10.2019 ರಂದು ನನಗೆ ಯಾವ ನಂಬರಿನಿಂದ ಫೋನ್ ಬಂದಿತ್ತು ಎಂದು ನಾನು ಪೊಲೀಸರಿಗೆ ಹೇಳಿರುವುದಿಲ್ಲ. ಪೊಲೀಸರಿಗೆ ಹೇಳಿಕೆ ನೀಡುವ ಸಂದರ್ಭದಲ್ಲಿ ಪ್ರಾಸಾ-1 ರವರ ಮೊಬೈಲ್ ನಂಬರ್ ನೀಡಲು ನನಗೆ ಯಾವುದೇ ತೊಂದರೆ ಇದ್ದಿರಲಿಲ್ಲ. ಆ ಸಂದರ್ಭದಲ್ಲಿ ಪ್ರಾಸಾ-1 ರವರು ನನಗೆ ಫೋನ್ ಮಾಡಿದ್ದರು ಎಂದು ತಿಳಿಸಲು ನಾನು ನನ್ನ ಮೊಬೈಲಿನ ಕರೆಪಟ್ಟಿಯನ್ನು ಪೊಲೀಸರಿಗೆ ನೀಡಿರುವುದಿಲ್ಲ. ನಾನು ಪ್ರಾಸಾ-1 ಹಾಗೂ ಚಂದ್ರಶೇಖರ್ ರವರ ಜೊತೆ ಚನ್ನಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಆರೋಪಿಯ ವಿರುದ್ದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಿನಾಂಕಃ20.10.2019 ರಂದು ಪ್ರಾಸಾ-1 ರವರು ನನಗೆ ಫೋನ್ ಮಾಡಿದ್ದು ಇಲ್ಲ ಹಾಗೂ ಆರೋಪಿಯ ವಿಚಾರವಾಗಿ ಯಾವುದೇ ಮಾತನಾಡಿಲ್ಲ ಅಂದರೆ ಸರಿಯಲ್ಲ. ಪ್ರಾಸಾ-1 ರವರಿಗೆ ಗುಂಡೇಟು ಹೇಗೆ ಆಯಿತು ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ. ನನ್ನ ಕಛೇರಿಯ ಸಿಬ್ಬಂದಿ ಪ್ರಾಸಾ-1 ರವರಿಗೆ ಗುಂಡೇಟು ಆದ ಬಗ್ಗೆ ನನಗೆ ತಿಳಿಸಿದ್ದರು. ಯಾವ ಸಿಬ್ಬಂದಿ ನನಗೆ ಈ ವಿಚಾರ ಹೇಳಿದ್ದರು ಎಂದು ನಾನು ಪೊಲೀಸರಿಗೆ ಮಾಹಿತಿ ನೀಡಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಗೊತ್ತಿಲ್ಲದಿದ್ದರು, ಚಂದ್ರಶೇಖರ್ ರವರ ಕೋರಿಕೆ ಮೇರೆಗೆ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರಾಸಾ-1 ಹಾಗೂ ಚಂದ್ರಶೇಖರ್ ರವರಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

Sd/-xxx
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ.